International Journal of Applied Research 2017; 3(12): 372-376




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2017; 3(12): 372-376
www.allresearchjournal.com
Received: 26-10-2017
Accepted: 27-11-2017

**ಮೋಹನ್ ಕುಮಾರ್ ಎಂ.ಜೆ**
ಸಂಶೋಧನಾ ವಿದ್ಯಾರ್ಥಿ,ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು

**Correspondence**
**ಮೋಹನ್ ಕುಮಾರ್ ಎಂ.ಜೆ**
ಸಂಶೋಧನಾ ವಿದ್ಯಾರ್ಥಿ,ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು

# ‘ಗೋಸುಂಬೆ ನ್ಯಾಯಪೀಠ’ ಮತ್ತು ‘ಭಾರತಾಂಬೆ’ ನಾಟಕಗಳು: ರಾಜಕಾರಣದಲ್ಲಿ ಧರ್ಮದ ಪ್ರವೇಶ; ನ್ಯಾಯ ವ್ಯವಸ್ಥೆಯ ವಿಡಂಬನೆ

**ಮೋಹನ್ ಕುಮಾರ್ ಎಂ.ಜೆ. ಸಂಶೋಧನಾ ವಿದ್ಯಾರ್ಥಿ**

ಜಾಗತಿಕ ಇತಿಹಾಸವನ್ನು ಗಮನಿಸಿದಾಗ ಇತಿಹಾಸದುದ್ದಕ್ಕೂ ಅನೇಕ ಧಾರ್ಮಿಕ ಸಂಘರ್ಷಗಳು ದಾಖಲಾಗಿರುವುದನ್ನು ಗಮನಿಸಬಹುದು. ಅದು ಯುರೋಪಿನಲ್ಲಿ ೧೬೧೮ರಿಂದ ೧೬೪೮ರವರೆಗೆ ನಡೆದ ಮೂವತ್ತು ವರ್ಷಗಳ ಧಾರ್ಮಿಕ ಯುದ್ಧವಿರಬಹುದು. ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಜರ್ಮನಿಯಲ್ಲಿ ಕಾಣಿಸಿಕೊಂಡಿದ್ದ ನಾಝಿ ಮತ್ತು ಯಹೂದಿ ಸಂಘರ್ಷಗಳು ಇರಬಹುದು. ಅಥವಾ ಇಂದಿಗೂ ಜೀವಂತವಾಗಿರುವ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್‌ಗಳ ನಡುವಿನ ಜೆರುಸೆಲೆಂಗೆ ಸಂಬಂಧಿಸಿದ ಬಿಕ್ಕಟ್ಟು ಇರಬಹುದು. ಬರ್ಮಾದ ರೋಹಿಂಗ್ಯಾ ಮುಸ್ಲಿಮರಿಗೆ ಸಂಬಂಧಿಸಿದ ಬಿಕ್ಕಟ್ಟು ಇರಬಹುದು. ಇವುಗಳಲ್ಲದೆ ಕೆಲವೊಂದು ಮುಸ್ಲಿಂ ರಾಷ್ಟ್ರಗಳಲ್ಲಿನ ಶಿಯಾ–ಸುನ್ನಿ ಸಂಘರ್ಷಗಳು, ಹಾಗೆಯೇ ಭಾರತದಲ್ಲಿನ ಹಿಂದೂ–ಮುಸ್ಲಿಂ ಸಂಘರ್ಷಗಳು, ಹೀಗೆ ಎಲ್ಲೆಡೆ ನಾವು ಧಾರ್ಮಿಕ ಸಂಘರ್ಷಗಳನ್ನು ಕಾಣುತ್ತಿದ್ದೇವೆ. ಈ ಧಾರ್ಮಿಕ ಸಂಘರ್ಷಗಳಿಗೆ ಅಲ್ಲಿನ ರಾಜಕಾರಣವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಾರಣವಾಗಿರುವುದನ್ನೂ ಸಹ ನಾವು ಗಮನಿಸುತ್ತಿದ್ದೇವೆ. ಈ ಬಗೆಯ ಧರ್ಮಾಧಾರಿತ ರಾಜಕಾರಣಗಳು ಯಾವತ್ತೂ ಸಮಷ್ಠಿ ನ್ಯಾಯವನ್ನು ಒದಗಿಸಲಾರವು. ದೇಶದ ಆಡಳಿತದಲ್ಲಿ ಧರ್ಮ ಪ್ರವೇಶಿಸಿದಾಗ ಅಲ್ಲಿನ ಅಲ್ಪಸಂಖ್ಯಾತ ಸಮುದಾಯಗಳು ಹಾಗೂ ದುರ್ಬಲ ವರ್ಗಗಳು ದೌರ್ಜನ್ಯಕ್ಕೊಳಗಾಗುವ ಸಂದರ್ಭಗಳು ಹೆಚ್ಚಿರುತ್ತವೆ. ಇದು ಕೇವಲ ಆ ಸಮುದಾಯಗಳ ದುಸ್ಥಿತಿಗೆ ಕಾರಣವಾಗುವುದಷ್ಟೇ ಅಲ್ಲದೆ ಸಾಮಾಜಿಕ ಅಶಾಂತಿಗೂ ಕಾರಣವಾಗುತ್ತದೆ. ಈ ಬಗೆಯ ಧರ್ಮಾಧಾರಿತ ರಾಜಕಾರಣ ಕೊನೆಗೊಂಡು ಸರ್ವೋದಯ ಕಲ್ಪನೆಯ ರಾಜಕಾರಣ ಅಸ್ತಿತ್ವಕ್ಕೆ ಬರಬೇಕಿದೆ. ಈ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳು ಆಲೋಚಿಸಬೇಕಿದೆ. ಜನತೆ ಜಾಗೃತವಾದಾಗ ಮಾತ್ರ ರಾಜಕಾರಣ ಶುದ್ಧವಾಗಲು ಸಾಧ್ಯ. ಇಂದಿನ ಪ್ರಜಾಪ್ರಭುತ್ವ ಸಮಾಜದಲ್ಲಿ ಪ್ರಜೆಗಳಿಗೆ ಅಂತಹ ಅವಕಾಶವೂ ಇದ್ದೇ ಇದೆ. ಧರ್ಮಾಧಾರಿತ ರಾಜಕಾರಣದ ಬದಲಿಗೆ ಜಾತ್ಯಾತೀತ ಹಾಗೂ ಧರ್ಮಾತೀತ ತತ್ವದ ರಾಜಕಾರಣದ ಅನುಷ್ಠಾನ ಇಂದಿನ ಅಗತ್ಯವಾಗಿದೆ.

‘ಸಾಹಿತ್ಯ ಸಮಾಜದ ಕನ್ನಡಿಯಿದ್ದಂತೆ’ ಎಂಬ ಪ್ರಸಿದ್ಧ ಹೇಳಿಕೆಯಿದೆ. ಈ ನಿಟ್ಟಿನಲ್ಲಿ ಸಮಕಾಲೀನ ಸಮಾಜದ ಬಿಕ್ಕಟ್ಟುಗಳನ್ನು ಚಿತ್ರಿಸುತ್ತಾ ಸಮಾಜವನ್ನು ತಿದ್ದುವ ಕಾರ್ಯವನ್ನು ಮಾಡಬೇಕಾದ್ದು ಸಾಹಿತಿಗಳ ಕರ್ತವ್ಯ. ಜಗತ್ತಿನಲ್ಲಿ ರಾರಾಜಿಸುತ್ತಿರುವ ಸಾಮಾಜಿಕ ಅಸಮಾನತೆ ಹಾಗೂ ಧರ್ಮಾಧಾರಿತ ರಾಜಕಾರಣ ಇವುಗಳನ್ನು ಕುರಿತು ಇಂದು ಚರ್ಚೆಯಾಗಬೇಕಿದೆ. ಈ ನಿಟ್ಟಿನಲ್ಲಿ ಹಲವಾರು ಲೇಖಕರು ತಮ್ಮ ಬರವಣಿಗೆಗಳ ಮೂಲಕ ಸಾಮಾಜಿಕ ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಮಾಡುತ್ತಿದ್ದಾರೆ. ನಾಟಕ ಪ್ರಕಾರವು ಈ ನಿಟ್ಟಿನಲ್ಲಿ ಕೆಲಸ ಮಾಡಬಹುದಾದ ಬಹು ಪ್ರಭಾವಶಾಲಿಯಾದ ಮಾಧ್ಯಮವಾಗಿದೆ. ಜಗತ್ತಿನ ಹಲವು ನಾಟಕಕಾರರು ತಮ್ಮ ನಾಟಕಗಳು ಹಾಗೂ ರಂಗಪ್ರಯೋಗಗಳ ಮೂಲಕ ಜನರಲ್ಲಿ ಈ ಬಗೆಯ ಎಚ್ಚರವನ್ನು ಮೂಡಿಸುವ ಪ್ರಯತ್ನಗಳನ್ನು ಮಾಡುತ್ತಾ ಬಂದಿದ್ದಾರೆ. ಈ ನಿಟ್ಟಿನಲ್ಲಿ ಸಮಕಾಲೀನ ಸಮಸ್ಯೆಗಳಿಗೆ ಸದಾ ಮುಖಾಮುಖಿಯಾಗುತ್ತಿರುವ ಕನ್ನಡದ ಬಹು ಮುಖ್ಯ ನಾಟಕಕಾರರಾದ ಚಂದ್ರಶೇಖರ ಕಂಬಾರ ಮತ್ತು ಜರ್ಮನಿಯಲ್ಲಿ ಹಿಟ್ಲರನ ಆಡಳಿತ ಕಾಲದಲ್ಲಿ ಬರವಣಿಗೆಯಲ್ಲಿ ತೊಡಗಿದ್ದ ಬ್ರೆಕ್ಟ್ ಇವರಿಬ್ಬರೂ ವಿಶೇಷವಾಗಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕಂಬಾರರ ‘ಭಾರತಾಂಬೆ’ ಹಾಗೂ ಬ್ರೆಕ್ಟ್‌ರ ‘ಇನ್ ಸರ್ಚ್ ಆಫ್ ಜಸ್ಟೀಸ್’ (ಕನ್ನಡಕ್ಕೆ: ‘ಗೋಸುಂಬೆ ನ್ಯಾಯಪೀಠ–ಸಿ.ಬಸವಲಿಂಗಯ್ಯ) ನಾಟಕಗಳನ್ನು ಪ್ರಾತಿನಿಧಿಕವಾಗಿ ತೆಗೆದುಕೊಂಡು ರಾಜಕಾರಣದಲ್ಲಿ ಧರ್ಮ ಪ್ರವೇಶಿಸುವುದರಿಂದ ನ್ಯಾಯದ ಪರಿಕಲ್ಪನೆಗಳು ಹೇಗೆ ವಿಡಂಬನೆಗೆ ಒಳಗಾಗುತ್ತವೆ ಎಂಬುದನ್ನು ಚರ್ಚಿಸಲಾಗಿದೆ.

ಮನುಷ್ಯ ಹುಟ್ಟಿದಾಗ ಧರ್ಮ ಹುಟ್ಟಿರಲಿಲ್ಲ. ಅಂದರೆ 'ಧರ್ಮ' ಮನುಷ್ಯ ಹುಟ್ಟಿಸಿದ ಕೂಸು. ಆದರೆ ಇಂದು ಆ ಧರ್ಮವೇ ಮನುಷ್ಯನನ್ನು ಆಳುತ್ತಿರುವುದು ವಿಪರ್ಯಾಸದ ಸಂಗತಿ. ಭಾರತ ಹಲವು ಧರ್ಮಗಳ ನಾಡಾಗಿದೆ. ಹಿಂದು, ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ, ಪಾರ್ಸಿ ಸೇರಿದಂತೆ ಹಲವು ಧರ್ಮಗಳು ಈ ದೇಶದಲ್ಲಿವೆ. ಅದರಲ್ಲಿ ಹಿಂದೂಗಳನ್ನು ಬಿಟ್ಟರೆ ಬಹುಸಂಖ್ಯಾತರು ಮುಸ್ಲಿಮರು. ಈ ಎರಡು ಧರ್ಮಗಳ ನಡುವಿನ ಸಂಘರ್ಷ ಇತಿಹಾಸದ ಉದ್ದಕ್ಕೂ ನಡೆದುಕೊಂಡು ಬಂದಿರುವಂಥದ್ದು. ಇದಿಷ್ಟೇ ಅಲ್ಲದೆ ಇಲ್ಲಿನ ಬಹುಸಂಖ್ಯಾತ ಹಿಂದೂ ಧರ್ಮವು ಬಹು ಸಂಕೀರ್ಣತೆಯಿಂದ ಕೂಡಿದ್ದು ಹಲವು ಜಾತಿಗಳ ಗುಚ್ಛವಾಗಿದೆ. ಇವುಗಳಲ್ಲಿ ಕೆಲವು ಜಾತಿಗಳನ್ನು ಉಚ್ಚವೆಂದೂ ಕೆಲವು ಜಾತಿಗಳನ್ನು ನೀಚವೆಂದೂ ಗುರುತಿಸಲಾಗಿದೆ. ಉಚ್ಚ ಜಾತಿಗಳಿಂದ ಕೆಳಜಾತಿಗಳ ಶೋಷಣೆ ಅವ್ಯಾಹತವಾಗಿ ಸಾಗಿದೆ. ಈ ಎಲ್ಲಾ ಸಂಕೀರ್ಣ ವಿಷಯಗಳನ್ನು ಒಳಗೊಂಡ ನಾಟಕ 'ಭಾರತಾಂಬೆ'. ಈ ನಾಟಕದಲ್ಲಿ ಹರಿಜನ ರಾಮಕ್ಕಳ ಮಗಳು ಬಂಗಾರಿ ಮಂತ್ರಿಯ ಮಗ ಬಷೀರ್‌ನಿಂದ ಅತ್ಯಾಚಾರಕ್ಕೆ ಒಳಗಾಗಿರುತ್ತಾಳೆ. ಈ "ಒಂದು ಘಟನೆಯನ್ನು ಕೋಮುವಾದಿಗಳು, ರಾಜಕೀಯ ಶಕ್ತಿಗಳು ಹೇಗೆ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತವೆ, ಅಮಾಯಕರು ಹೇಗೆ ಬಲಿಪಶುಗಳಾಗುತ್ತಾರೆ ಎಂಬುದನ್ನು ಸಮಕಾಲೀನ ಭಾರತದ ತಲ್ಲಣಗಳ ಹಿನ್ನೆಲೆಯಲ್ಲಿ ನಿರೂಪಿಸುವ ನಾಟಕವಿದು. ಸಮಯಸಾಧಕ ದುಷ್ಟರಿಗೆ ಒತ್ತೆಯಾಳಾಗಿರುವ ದೇಶವು 'ಭಾರತಾಂಬೆ'ಯ ಹೆಸರಿನಲ್ಲಿ ಅನುಕಂಪಕ್ಕೆ ವ್ಯಂಗ್ಯಕ್ಕೆ ಅವಹೇಳನೆಗೆ ಹೇಗೆ ಗುರಿಯಾಗಿದೆ."[೧]ಎಂಬುದನ್ನು ನಾಟಕ ಬಿತ್ತರಿಸುತ್ತದೆ.

ಬ್ರೆಕ್ಟ್‌ರ 'ಗೋಸುಂಬೆ ನ್ಯಾಯಪೀಠ' ನಾಟಕವು ೨೦ನೇ ಶತಮಾನದ ಪೂರ್ವಾರ್ಧದ ಜರ್ಮನಿಯ ಸಾಮಾಜಿಕ ಸಂದರ್ಭದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರಚಿತವಾದುದು. ಜರ್ಮನಿಯಲ್ಲಿ ಹಿಟ್ಲರನ ನೇತೃತ್ವದಲ್ಲಿ ನಾಝಿ ಆಡಳಿತ ಅಧಿಕಾರಕ್ಕೆ ಬರುತ್ತಿದ್ದಂತೆ ರಾಷ್ಟ್ರೀಯತೆ ಹಾಗೂ ಶುದ್ಧ ರಕ್ತದ ಹೆಸರಿನಲ್ಲಿ ಯಹೂದಿಗಳ ಮೇಲೆ ದೌರ್ಜನ್ಯಗಳು ಶುರುವಾದವು. ಬ್ರೆಕ್ಟ್ ಇವುಗಳನ್ನು ತಮ್ಮ ಲೇಖನ ಹಾಗೂ ಕೃತಿಗಳ ಮೂಲಕ ನಿರ್ದಾಕ್ಷಿಣ್ಯವಾಗಿ ಟೀಕಿಸಿದರು. ಸರ್ಕಾರದ ಕಾರ್ಯವೈಖರಿಯನ್ನು ಟೀಕಿಸುವ ಅವರ ಈ ಗುಣದಿಂದಾಗಿ ಅವರು ಆಳುವ ಪಕ್ಷದ ಕೆಂಗಣ್ಣಿಗೆ ಗುರಿಯಾದರು. ಸರ್ಕಾರ ಆದ್ಯತೆಯ ಮೇಲೆ ಮುಗಿಸಬೇಕೆಂದಿದ್ದ ಬರಹಗಾರರಲ್ಲಿ ಬ್ರೆಕ್ಟ್ ಮೊದಲ ಪಟ್ಟಿಯಲ್ಲಿದ್ದರು. ಹೀಗಾಗಿ ಅವರು ದೇಶ ಬಿಟ್ಟು ಹೋಗಬೇಕಾಯಿತು. ಆದರೂ ದೇಶಾಂತರದಲ್ಲಿದ್ದುಕೊಂಡೆ ತಮ್ಮ ಬರವಣಿಗೆಗಳನ್ನು ಮುಂದುವರಿಸಿದರು. ಯಹೂದಿಗಳ ಮೇಲಾಗುತ್ತಿದ್ದ ದೌರ್ಜನ್ಯಗಳನ್ನು ತಮ್ಮ ನಾಟಕಗಳಲ್ಲಿ ಚಿತ್ರಿಸುವ ಮೂಲಕ ಆ ಬಗ್ಗೆ ಜಗತ್ತಿನ ಗಮನ ಸೆಳೆದರು. ಈ ಹಿನ್ನೆಲೆಯಲ್ಲಿ ರಚಿತವಾದದ್ದು ಪ್ರಸ್ತುತ ಲೇಖನದಲ್ಲಿ ಚರ್ಚಿತವಾಗಿರುವ ಈ ನಾಟಕ. ಇಲ್ಲಿ ಆರ್ನಾಡ್ಟ್ ಎಂಬ ಯಹೂದಿಯೊಬ್ಬನ ಅಂಗಡಿಯನ್ನು ಎಸ್.ಎ ದಳ ಎಂಬ ರಾಷ್ಟ್ರೀಯವಾದಿ ಸಂಘಟನೆಗೆ ಸೇರಿದ ಮೂರು ಜನ ನಾಝಿಗಳು ಸೇರಿ ಲೂಟಿ ಮಾಡಿರುತ್ತಾರೆ. ಅವರ ವಿರುದ್ಧ ದೂರು ದಾಖಲಾಗಿರುತ್ತದೆ. ಪೋಲೀಸರು ತನಿಖೆಯನ್ನು ಆರಂಭಿಸಿರುತ್ತಾರೆ. ನ್ಯಾಯಾಧೀಶರೂ ಕೂಡ ಈ ಕೇಸಿನ ಬಗ್ಗೆ ವಿಚಾರಣೆಯನ್ನು ನಡೆಸುತ್ತಿರುತ್ತಾರೆ. ಆದರೆ ತೀರ್ಪು ನಾಝಿಗಳ ವಿರುದ್ಧ ಬರದಂತೆ ಒತ್ತಡಗಳು ಹೆಚ್ಚಾಗುತ್ತವೆ. ಅದುವರೆಗೂ ತನ್ನ ವೃತ್ತಿಗೌರವವನ್ನು ಕಾಪಾಡಿಕೊಂಡು ಬಂದಿದ್ದ ನ್ಯಾಯಾಧೀಶರಿಗೆ ಹಿಟ್ಲರನ ಆಡಳಿತದಲ್ಲಿ ನಾಝಿಗಳ ವಿರುದ್ಧವಾಗಿ ಯಹೂದಿಯೊಬ್ಬನಿಗೆ ನ್ಯಾಯ ಕೊಡಿಸುವುದು ಸವಾಲೆನಿಸುತ್ತದೆ. ನ್ಯಾಯಾಧೀಶರು ಕಡೆಗೂ ಪ್ರಾಣಭಯದಿಂದಾಗಿ ತನ್ನ ಆತ್ಮಸಾಕ್ಷಿಗೆ ವಿರುದ್ಧವಾದ ತೀರ್ಪು ನೀಡಬೇಕಾಗಿ ಬರುತ್ತದೆ. ಹೀಗೆ ಬ್ರೆಕ್ಟ್ ತಮ್ಮ ಈ ನಾಟಕದಲ್ಲಿ ಧರ್ಮಾಧಾರಿತ ರಾಜಕಾರಣದಲ್ಲಿ ನ್ಯಾಯದ ಪರಿಕಲ್ಪನೆ ಹೇಗೆ ವಿಡಂಬನೆಗೆ ಒಳಗಾಗುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ.

'ಭಾರತಾಂಬೆ' ನಾಟಕವು ಧರ್ಮಾಧಾರಿತ ರಾಜಕೀಯ ಸಂಘರ್ಷದ ಜೊತೆಗೆ ಹಿಂದೂ ಸಮಾಜದೊಳಗಿನ ವರ್ಣಾಶ್ರಮ ಪದ್ಧತಿಯಡಿ ಕೆಳಜಾತಿಯವರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯಗಳ ಬಗೆಗೂ ಬೆಳಕು ಚೆಲ್ಲುತ್ತದೆ. ಪಂಚಾಯ್ತಿ ಚೇರ್‌ಮನ್ ಆಗಿದ್ದ ಶೆಟ್ಟಿ ಅತ್ಯಾಚಾರ ಸಂತ್ರಸ್ತೆ ಬಂಗಾರಿಗೆ ನ್ಯಾಯ ಕೊಡಿಸುವ ಬದಲು ಹಣದ ಆಮಿಷ ಹಾಗೂ ರಾಜಕೀಯ ಉದ್ದೇಶಗಳಿಗಾಗಿ ದೂರು ಹಿಂಪಡೆಯುವಂತೆ ರಾಮಕ್ಕನನ್ನು ಪುಸಲಾಯಿಸಲು ಬಂದಿರುತ್ತಾನೆ. ಆ ಸಂದರ್ಭದಲ್ಲಿ ಅವನು ಬಂಗಾರಿಯ ಅತ್ಯಾಚಾರವನ್ನು ಸಮರ್ಥಿಸಿಕೊಳ್ಳುವ ಬಗೆ ಹಿಂದೂ ಸಮಾಜದಲ್ಲಿ ಕೆಳವರ್ಗದ ಮಹಿಳೆಯರನ್ನು ಎಷ್ಟು ತುಚ್ಛವಾಗಿ ಕಾಣುತ್ತಾರೆ ಎಂಬುದನ್ನು ಬಿಂಬಿಸುವಂತಿದೆ. ಮಂತ್ರಿ ಮಗ ಆದ ಮಾತ್ರಕ್ಕೆ ನಮ್ಮಂಥವರ್ನ ಕೆಡಿಸೋದೇನ್ರಿ? ಎಂಬ ರಾಮಕ್ಕನ ಮಾತಿಗೆ ಶೆಟ್ಟಿ ಹೀಗೆ ಹೇಳುತ್ತಾನೆ. "ಅವರು ಕೆಡಿಸಿಲ್ಲ, ಒಂದು ವೇಳೆ ಕೆಡಿಸಿದರು ಅನ್ನೋಣ. ಯಾರನ್ನ ಕೆಡಿಸಿದರು? ಹೊಲತೀನ್ನ! ಹೊಲತೇರ್ನ ಯಾರಾದರೂ ಕೆಡಿಸ್ತಾರ? ರೊಕ್ಕಾ ಕೊಡತಾರ ಮಲಗತಾರ, ಅಷ್ಟೆ. ಯಾರಾದರೂ ಊಚ ಜಾತಿಯವರ ಮ್ಯಾಲ ಕೈ ಮಾಡಿದರ ಅದು ಕೆಡಸಿಧಾಂಗ. ಇದಕ್ಕ ಕೆಡಿಸಿದರು ಅಂತ ಹೇಗಂತೀಯವ್ವಾ?"[೨] ಎಂದು ಹೇಳುತ್ತಾನೆ. ಶೆಟ್ಟಿಯ ಈ ಮಾತುಗಳು ಹಿಂದೂ ಧರ್ಮದಲ್ಲಿ ಹಿಂದಿನಿಂದಲೂ ನಡೆದು ಬಂದಿರುವ ಮೇಲ್ಜಾತಿಯವರಿಗೊಂದು ನ್ಯಾಯ ಕೆಳಜಾತಿಯವರಿಗೊಂದು ನ್ಯಾಯ ಎಂಬ ತಾರತಮ್ಯ ನೀತಿಯನ್ನು ಹಾಗೂ ಮೇಲ್ಜಾತಿಯ ಜನ ತಮ್ಮ ರಾಜಕೀಯ ಲಾಭಕ್ಕಾಗಿ ಕೆಳಜಾತಿಯ ಜನರನ್ನು ಎಷ್ಟು ಹೀನವಾಗಿ ನಡೆಸಿಕೊಳ್ಳುತ್ತಾರೆ ಎಂಬುದನ್ನು ತಿಳಿಸುತ್ತವೆ.

ಜರ್ಮನಿಯಲ್ಲಿಯೂ ಶುದ್ಧ ರಕ್ತದ ಹೆಸರಿನಲ್ಲಿ ಆರ್ಯನ್ನರು, ನೀಚಕುಲದವರು ಎಂಬ ತಾರತಮ್ಯವಿರುತ್ತದೆ. 'ಗೋಸುಂಬೆ ನ್ಯಾಯಪೀಠ' ನಾಟಕದಲ್ಲೂ ಇಂತಹ ಉಚ್ಚ–ನೀಚ ಎಂಬ ಹೆಸರಿನಲ್ಲಿ ನಡೆಯುವ ಭೇದ ಚಿತ್ರಿತವಾಗಿರುವುದನ್ನು ಗಮನಿಸಬಹುದು. ನ್ಯಾಯಾಧೀಶರು ಇನ್‌ಸ್ಪೆಕ್ಟರ್ ಬಳಿ ಆರ್ನಾಡ್ಟ್‌ನ ಬಗ್ಗೆ ವಿಚಾರಿಸಿದಾಗ ಅವರು ಆರ್ನಾಡ್ಟ್ ಹಾಗೂ ಅವನ ಸಮುದಾಯದ ಬಗ್ಗೆ ಈ ರೀತಿ ಹೇಳುತ್ತಾರೆ. "ಅವರು ಎಸ್.ಎ.ಸೆವನ್ ಟ್ರೂಪ್‌ಗೆ ಸೇರಿದವರು ಅಂತ ರೆಕಾರ್ಡ್‌ಗಳಲ್ಲಿ ಎಲ್ಲೂ ನಮೂದಿಸುವುದಿಲ್ಲ. ಅಲ್ಲದೆ ಅವರು ಆರ್ಯ ಜನಾಂಗಕ್ಕೆ ಸೇರಿದವರು ಎಂಬುದರ ಬಗ್ಗೆಯೂ ನಮೂದಿಸಿಲ್ಲ. ದೇವರಿಗೆ ಗೊತ್ತು ಅವರು ಯಾವ ಜನಾಂಗಕ್ಕೆ ಸೇರಿದವರೋ. ಇವರನ್ನ ನೋಡಿದರೆ ಆರ್ಯರು ಅನಿಸುವುದಿಲ್ಲ. ಯಾವ ನೀಚ ಕುಲವೋ. ಆರ್ಯರು ಎಲ್ಲಿಯಾದರೂ ಕೀಳು ಕುಲಕ್ಕೆ ಸೇರಿದವರ? ಆ ಕಾರಣಕ್ಕಾಗಿಯೇ ಎಸ್.ಎ. ಯಾವುದೇ ವಿಚಾರಣೆಗೆ ಒಳಪಡಿಸುವ ಗೋಜಿಗೆ ಹೋಗದೆ ಅವರನ್ನ ದಂಡಿಸಲು ಮುಂದಾಗಿದೆ"[೩] ಎಂದು ಧರ್ಮ ಹಾಗೂ ಜನಾಂಗವನ್ನು ಮುಂದು ಮಾಡಿಕೊಂಡು ಶಿಕ್ಷೆಯನ್ನು ನಿರ್ಧರಿಸುವ ಎಸ್.ಎ. ದಳದ ನೀತಿಯನ್ನು ತಿಳಿಸುತ್ತಾರೆ. ಇದು ಆ ದೇಶದಲ್ಲಿ ನಡೆಯುತ್ತಿರುವ ಉಚ್ಚ–ನೀಚ ಎಂಬ ಧರ್ಮಾಧಾರಿತ ಹಾಗೂ ಸ್ವಜನ ಪಕ್ಷಪಾತದಿಂದ ಕೂಡಿದ ರಾಜಕಾರಣವನ್ನು ತಿಳಿಸುತ್ತದೆ.

ಇಂದಿನ ಧರ್ಮಾಧಾರಿತ ರಾಜಕಾರಣದಲ್ಲಿ ಸ್ವಜನ, ಸ್ವಧರ್ಮ ಹಾಗೂ ಸ್ವಹಿತಾಸಕ್ತಿಗಳು ಹೇಗೆ ಕೆಲಸ ಮಾಡುತ್ತವೆ, ರಾಜಕಾರಣ ಎಂಬುದು ಹೇಗೆ ಸ್ವಾರ್ಥದ ಗೂಡಾಗಿದೆ ಎಂಬುದನ್ನು 'ಭಾರತಾಂಬೆ' ನಾಟಕವು ಬಿತ್ತರಿಸುತ್ತದೆ. ಇಲ್ಲಿ ಕರಿನಿಂಗ ತನ್ನ ಅತ್ತೆ ರಾಮಕ್ಕ ಪೋಲೀಸರಿಗೆ ನೀಡಿರುವ ದೂರಿಗೆ ಸಾಕ್ಷಿ ಹಾಕಿರುತ್ತಾನೆ. ಆದರೆ ಇದೇ ಮುಂದೆ ಅವನಿಗೆ ಸಂಚಕಾರವಾಗುತ್ತದೆ. ಸಾಕ್ಷಿಗೆ ಸಹಿ ಹಾಕಿದ್ದರಿಂದ ಮುಸಲ್ಮಾನರು ಕರಿನಿಂಗನನ್ನು ಕೊಲ್ಲಲು ಪ್ರಯತ್ನಿಸುತ್ತಿರುತ್ತಾರೆ. ಮತ್ತೊಂದೆಡೆ ಹಿಂದೂ ಜನರು ಕರಿನಿಂಗನಿಗೆ ರಕ್ಷಣೆ ಕೊಡುವುದಾಗಿಯೂ ತುರುಕರ ರುಂಡಗಳನ್ನು ಚೆಂಡಾಡುವುದಾಗಿಯೂ ಹೇಳಿಕೊಂಡು ಓಡಾಡುತ್ತಿರುತ್ತಾರೆ. ಈ ನಡುವೆ ಮಂತ್ರಿ ರಾಮಕ್ಕನ ಬಳಿಗೆ ಬಂದು ನಿನ್ನ ಅಳಿಯ ಕರಿನಿಂಗನ ಪ್ರಾಣವನ್ನು ಉಳಿಸಲಾದರೂ ನೀನು ಪೋಲೀಸರಿಗೆ ಕೊಟ್ಟ ದೂರನ್ನು ಹಿಂದಕ್ಕೆ ಪಡೆಯಬೇಕೆಂದು ಹೇಳುತ್ತಾನೆ. ಏಕೆಂದರೆ ನಿನ್ನ ಅಳಿಯನನ್ನು ಹಿಂದೂಗಳೇ ಕೊಲ್ಲಲು ಸಂಚು ಹೂಡಿದ್ದಾರೆ, ಇಷ್ಟು ಚೆಲುವೆಯಾದ ನಿನ್ನ ಮಗಳನ್ನು ಸುಲಭವಾಗಿ ಅನುಭವಿಸಲು ಇದರಿಂದ ಅವರಿಗೆ ಸಾಧ್ಯವಾಗುವುದು, ಜೊತೆಗೆ ಈ ಕೊಲೆಯನ್ನು ಸುಲಭವಾಗಿ ಮುಸಲ್ಮಾನರ ಮೇಲೆ ಹಾಕಬಹುದು ಎಂಬುದು ಅವರ ಲೆಕ್ಕಾಚಾರ ಎಂದು ಹೇಳುತ್ತಾನೆ. ಇಲ್ಲಿ ಅತ್ಯಾಚಾರದ ಸಂತ್ರಸ್ತೆಯಾಗಲಿ, ಅವಳ ಗಂಡ ಕರಿನಿಂಗನಾಗಲಿ, ಅವಳ ತಾಯಿ ರಾಮಕ್ಕನಾಗಲಿ ಮುಖ್ಯವಾಗದೆ ಈ ಒಂದು ಸಂದರ್ಭವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವಲ್ಲಿ ಶಾಸ್ತ್ರೀ, ಶೆಟ್ಟಿ, ಮಂತ್ರಿ ಎಲ್ಲರೂ ಪ್ರಯತ್ನಿಸುವುದು ಕಂಡುಬರುತ್ತದೆ. ಮಂತ್ರಿ ಕಡೆಗೂ ಮತೀಯ ಸಂಘರ್ಷದ ಹೆಸರಿನಲ್ಲಿ ಬಹಳ ನಾಜೂಕಾಗಿ ರಾಮಕ್ಕನನ್ನು ಮರುಳುಗೊಳಿಸಿ ತನ್ನ ಮಗನ ವಿರುದ್ಧದ ದೂರನ್ನು ಹಿಂಪಡೆಯುವ ಪತ್ರಕ್ಕೆ ಸಹಿ ಪಡೆದುಕೊಳ್ಳುತ್ತಾನೆ. ಅತ್ತ ಕಡೆ ಹಿಂದೂ ಗುಂಪು ರಾಮಕ್ಕನ ಅಳಿಯ ಅವಿತಿದ್ದ ಗುಡಿಸಲ ಜೋಪಡಿಗೂ ಬೆಂಕಿ ಹಚ್ಚುತ್ತದೆ. ಬಂಗಾರಿ ಶೀಲದ ಜೊತೆಗೆ ತನ್ನ ಮಾಂಗಲ್ಯವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಆದರೆ ಈ ಧರ್ಮಾಧಾರಿತ ರಾಜಕೀಯದಲ್ಲಿ ಎರಡೂ ಧರ್ಮಗಳ ಮೇಲ್ವರ್ಗದ ಜನರು ಮಾತ್ರ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಇಲ್ಲಿ ಯಾರನ್ನು ಬೇಕಾದರೂ ಬಲಿಕೊಟ್ಟು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಜಾತಿ ಹಾಗೂ ಧರ್ಮಾಧಾರಿತ ರಾಜಕಾರಣ ಓದುಗರನ್ನು ಆಲೋಚನೆಗೆ ಹಚ್ಚುತ್ತದೆ.

'ಗೋಸುಂಬೆ ನ್ಯಾಯಪೀಠ' ನಾಟಕದಲ್ಲೂ ಸ್ವಜನ ಪಕ್ಷಪಾತ ಢಾಳಾಗಿ ಕಾಣಿಸುತ್ತದೆ. ನಾಟಕದುದ್ದಕ್ಕೂ ನ್ಯಾಯಾಧೀಶರಿಗೆ ನಾಝಿ ಸಂಘಟನೆಯಾದ ಎಸ್.ಎ. ದಳದ ವಿರುದ್ಧ ತೀರ್ಪು ನೀಡದಂತೆ ಪರೋಕ್ಷವಾಗಿ ಸೂಚನೆಗಳು ದೊರೆಯುತ್ತಲೇ ಹೋಗುತ್ತವೆ. ಪ್ರಾಸಿಕ್ಯೂಟರ್ ಆಡುವ ಮಾತುಗಳೂ ಇದನ್ನೇ ಅನುಮೋದಿಸುತ್ತವೆ. ಅವರು "ಮಿ.ಗಾಲ್ ನಿಮ್ಮ ದೇಶಭಕ್ತಿಗೆ ಪೂರಕವಾಗಿ, ಅಂತಃಸತ್ವಕ್ಕೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಯಾರಿಗೆ ಒಳಿತು, ಮತ್ಯಾರಿಗೆ ಕೆಡುಕನ್ನು ಬಯಸಬೇಕು ಎಂಬುದಕ್ಕೆ ನಿಮ್ಮ ದೇಶಭಕ್ತಿ ಮಾರ್ಗದರ್ಶನವಾಗಬೇಕು. ನಾನು ಬಹುಮುಖ್ಯವಾಗಿ ಒಂದು ವಿಷಯ ಸ್ಪಷ್ಟಪಡಿಸಬೇಕಾಗಿದೆ. ನನಗೆ ಎಸ್.ಎ. ದಳದ ಉನ್ನತ ಮಟ್ಟದಿಂದ ಸಲಹೆ ಸೂಚನೆಗಳು ಬಂದಿವೆ. ಅದೇನೆಂದರೆ, ಜರ್ಮನಿಯ ಬೆನ್ನೆಲುಬು ಎಂದರೆ ನ್ಯಾಯಾಲಯ ಮತ್ತು ನ್ಯಾಯಾಧೀಶರು. ಇದರಿಂದ ಎಸ್.ಎ. ದಳ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದೆ."[೪] ಎಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ನಮ್ಮ ಘನ ಸರ್ಕಾರದ ನ್ಯಾಯಾಂಗ ಸಚಿವರು ಒಂದು ಮಹತ್ವವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, 'ಯಾವುದೇ ರೀತಿಯ ಅನುಕೂಲಗಳು ಜರ್ಮನಿಯ ಜನತೆಗೆ ಪ್ರತ್ಯಕ್ಷವಾಗಿ, ಇಲ್ಲವೇ ಪರೋಕ್ಷವಾಗಿ ಆದರೂ ಅದು ಸತ್ಯದ ಪ್ರತಿಪಾದನೆ' ಅಂತಾ ಸ್ಪಷ್ಟಪಡಿಸಿದ್ದಾರೆ ಎಂದು ಹೇಳುತ್ತಾನೆ. ಈ ಬಗೆಯ ಸ್ವಜನ ಪಕ್ಷಪಾತದಿಂದ ಕೂಡಿರುವ ಹೇಳಿಕೆಗಳು ನಿಷ್ಪಕ್ಷಪಾತ ತೀರ್ಪಿಗೆ ಅಡ್ಡಿಪಡಿಸುವ ಲಕ್ಷಣವನ್ನು ಹೊಂದಿರುವುದರಿಂದ ನ್ಯಾಯಾಧೀಶರು ಮತ್ತಷ್ಟು ಗೊಂದಲಕ್ಕೊಳಗಾಗುತ್ತಾರೆ.

ಧರ್ಮಾಧಾರಿತ ರಾಜಕೀಯವು ತನ್ನ ಉದ್ದೇಶ ಸಾಧನೆಗೆ ಅಧಿಕಾರಶಾಹಿಯನ್ನು ದುರ್ಬಳಕೆ ಮಾಡಿಕೊಳ್ಳುವುದು ಸಹಜ. 'ಭಾರತಾಂಬೆ' ನಾಟಕದಲ್ಲೂ ಸಹ ಅಧಿಕಾರಶಾಹಿಯು ರಾಜಕೀಯ ದಾಳವಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. ನ್ಯಾಯ ದೊರಕಿಸಿಕೊಡಬೇಕಾಗಿದ್ದ ಪೋಲೀಸ್ ಇನ್ಸ್ಪೆಕ್ಟರೇ ಮಂತ್ರಿಯ ಮಗನ ವಿರುದ್ಧದ ದೂರನ್ನು ವಾಪಸ್ ಪಡೆಯುವಂತೆ ರಾಮಕ್ಕನ ಮೇಲೆ ಒತ್ತಡ ಹೇರುತ್ತಾರೆ. ಅದಕ್ಕಾಗಿ ಕುತಂತ್ರದಿಂದ ರಾಮಕ್ಕನ ಮೇಲೆ ಸೂಳೆಗಾರಿಕೆಯ ಅಪವಾದವನ್ನು ಹೊರಿಸುತ್ತಾರೆ. ದೂರು ವಾಪಸ್ ಪತ್ರಕ್ಕೆ ಸಹಿ ಹಾಕುವಂತೆ ಬಲವಂತಪಡಿಸುತ್ತಾರೆ. ಇದೆಲ್ಲಾ ಮಂತ್ರಿಯ ಸೂಚನೆಯಂತೆಯೇ ನಡೆದಿರುತ್ತದೆ ಎಂಬುದು ಸ್ಪಷ್ಟವಾದ ಸಂಗತಿ. ಈ ಒಂದು ಘಟನೆ ರಾಜಕಾರಣಿಗಳ ಮೇಲಿನ ಭಯದಿಂದ ಅಧಿಕಾರಶಾಹಿಗಳು ಹೇಗೆ ಅವರ ಗುಲಾಮರಂತೆ ವರ್ತಿಸುತ್ತಾರೆ ಎಂಬುದನ್ನು ತಿಳಿಸುತ್ತದೆ. ಹೀಗೆ ರಾಜಕಾರಣವು ಅಧಿಕಾರಶಾಹಿಗಳ ಮೇಲೆ ಒತ್ತಡ ಹೇರಿ ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುವುದನ್ನು ನಾವು ಇಲ್ಲಿ ಗಮನಿಸಬಹುದು.

'ಗೋಸುಂಬೆ ನ್ಯಾಯಪೀಠ' ನಾಟಕದಲ್ಲೂ ರಾಜಕಾರಣ ಅಧಿಕಾರಶಾಹಿಯನ್ನು ತನ್ನ ಧರ್ಮಾಧಾರಿತ ಆಡಳಿತದ ಪರವಾಗಿ ನಡೆದುಕೊಳ್ಳುವಂತೆ ಪರೋಕ್ಷವಾಗಿ ಒತ್ತಡ ಹೇರುವುದನ್ನು ಗಮನಿಸಬಹುದು. ನ್ಯಾಯಾಧೀಶರಿಗೆ ಆರ್ನಾಡ್ಸ್ ಮತ್ತು ಎಸ್.ಎ. ದಳ ಇಬ್ಬರನ್ನೂ ದೋಷಮುಕ್ತಗೊಳಿಸಿ ಕೂಲಿ ವ್ಯಾಗ್ನರ್ ಮೇಲೆ ಪ್ರಚೋದನೆ ಕೇಸನ್ನು ಹಾಕುವಂತೆ ಸಲಹೆಗಳು ಬರುತ್ತವೆ. ಆದರೆ ಈ ರೀತಿ ಮಾಡಿದರೂ ಆರ್ನಾಡ್ಸ್‌ನ ಪಾರ್ಟ್‌ನರ್ ಎಸ್.ಎ. ದಳದ ಬಳಿ ಪರಿಹಾರ ಧನಕ್ಕಾಗಿ ಖಂಡಿತ ಒತ್ತಾಯಿಸುತ್ತಾನೆ. ಅನಂತರ ಆ ಎಸ್.ಎ. ದಳದವರು ನನ್ನ ಕೊರಳ ಕಡೆಗೆ ಪಿಸ್ತೂಲ್ ತಿರುಗಿಸುತ್ತಾರೆ ಎಂದು ನ್ಯಾಯಾಧೀಶರು ತನ್ನ ಆತಂಕವನ್ನು ವ್ಯಕ್ತಪಡಿಸುತ್ತಾರೆ. ಕಡೆಗೆ ನ್ಯಾಯಾಧೀಶರು ಎಷ್ಟು ಬೆದರಿರುತ್ತಾರೆಂದರೆ 'ಓ ದೇವರೇ! ನಾನು ಏನು ಮಾಡುವುದಕ್ಕೂ ಈಗ ಸಿದ್ಧನಿದ್ದೇನೆ. ಅವರಿಗೆ ಏನು ಬೇಕಾಗಿದೆ ಅಂತ ನನಗೂ ತಿಳಿಯುತ್ತಿಲ್ಲ. ಅವರು ನನ್ನಿಂದ ಯಾವ ಅಪೇಕ್ಷೆ ಇಟ್ಟುಕೊಂಡಿದ್ದಾರೆ ಅಂತಾನಾದ್ರೂ ಗೊತ್ತಾಗಬೇಕಲ್ಲ' ಎಂದು ಚಡಪಡಿಸುತ್ತಾರೆ. ಇಲ್ಲಿ ಹಿಟ್ಲರ್‌ನ ನಾಝಿ ಆಡಳಿತದ ಜನಾಂಗೀಯವಾದದ ಪೆಡಂಭೂತಕ್ಕೆ ಹೆದರಿ ಜೀವಭಯದಿಂದ ಕಾರ್ಯ ನಿರ್ವಹಿಸುವ ನ್ಯಾಯಾಧೀಶ, ಇನ್ಸ್ಪೆಕ್ಟರ್ ಮುಂತಾದ ಪಾತ್ರಗಳನ್ನು ಗಮನಿಸಬಹುದು. ಹೀಗೆ ಹಿಟ್ಲರನ ಆಡಳಿತದಲ್ಲಿ ನೌಕರಶಾಹಿಗಳ ಬದುಕಿನ ನರಕಯಾತನೆಯನ್ನು ಬ್ರೆಕ್ಟ್ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ರಾಜಕಾರಣದಲ್ಲಿ ಧರ್ಮ ಪ್ರವೇಶಿಸುವುದರಿಂದ ನ್ಯಾಯ ವ್ಯವಸ್ಥೆ ಹೇಗೆ ವಿಡಂಬನೆಗೆ ಒಳಗಾಗುತ್ತದೆ ಎಂಬುದನ್ನು 'ಭಾರತಾಂಬೆ' ನಾಟಕದಲ್ಲಿ ಕಂಬಾರರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ರಾಮಕ್ಕನನ್ನು ಮರುಳು ಮಾಡಲು ಮಂತ್ರಿ ಆಡುವ ಮಾತುಗಳಲ್ಲಿ ಧರ್ಮಾಧಾರಿತ ರಾಜಕಾರಣದಲ್ಲಿ ನ್ಯಾಯದ ಪರಿಕಲ್ಪನೆ ಹೇಗೆ

ತೆಳುವಾಗುತ್ತದೆ ಎಂಬುದು ತಿಳಿಯುತ್ತದೆ. ಮಂತ್ರಿಯ ನಾಜೂಕು ಮಾತುಗಳನ್ನು ನಾವು ಇಲ್ಲಿ ಗಮನಿಸಬಹುದು. "ನನ್ನ ಮಗ ನಿನ್ನ ಮಗಳ ಮೇಲೆ ಅತ್ಯಾಚಾರ ಮಾಡಿದ ಅಂತಲ್ಲ ತಾಯೀ. ಅಷ್ಟೇ ಆಗಿದ್ದರೆ ಬಷೀರನನ್ನ ಯಾವಾಗಲೋ ಕೊಂದು ಹಾಕುತ್ತಿದ್ದೆ. ಇಲ್ಲಿರೋದು ಒಬ್ಬ ಮುಸಲ್ಮಾನ ಒಬ್ಬ ಹಿಂದೂ ನಾರಿಯ ಮೇಲೆ ಅತ್ಯಾಚಾರ ಮಾಡಿದ – ಇದು! ಆಗಲೇ ಇಡೀ ಊರಿನ ಹಿಂದೂಗಳೆಲ್ಲ ಸೇರಿ ಮುಸಲ್ಮಾನರ ರುಂಡಗಳನ್ನ ಚೆಂಡಾಡಬೇಕೂಂತ ಇದ್ದಾರೆ. ಮುಸಲ್ಮಾನರೂ ಒಂದಾಗ್ತಾ ಇದಾರೆ. ನಾಳೆ ಬೆಳಗಾಗೋದರೊಳಗೆ ಎಷ್ಟು ಜನ ತಾಯಂದಿರು ಮಕ್ಕಳ್ನ ಕಳಕೊಂಡಿರತಾರೋ! ಈ ಸುದ್ದಿ ದೇಶಕ್ಕೆ ತಲುಪಿ ದೇಶದ ತುಂಬ ಹಿಂದೂ ಮುಸ್ಲಿಂ ಗಲಭೆ ಸುರುವಾಗುತ್ತೆ. ನೋಡು ನೋಡುವಷ್ಟರಲ್ಲಿ ಕೋಟಿ ಹೆಣ ಬೀಳುತ್ತವೆ. ಈಗ ನೀ ಹೇಳು ತಾಯಿ. ನಿನ್ನ ಒಬ್ಬಳೇ ಮಗಳಿಗೆ ಅನ್ಯಾಯವಾದಾಗ ನಿನ್ನ ಕರುಳಿಗೆ ಎಂಥ ವೇದನೆಯಾಯ್ತು. ಇನ್ನು ನಮ್ಮೆಲ್ಲರ ತಾಯಿಯಾದ ಆ ಭಾರತಾಂಬೆ – ಕೋಟಿ ಕೋಟಿ ಮಕ್ಕಳು ತಮ್ಮ ತಮ್ಮಲ್ಲೇ ಬಡಿದಾಡಿ ಸಾಯುತ್ತಿರುವ ದೃಶ್ಯವನ್ನು ಮೌನವಾಗಿ ನಿಂತುಕೊಂಡು ನೋಡಬೇಕಾದ ಆ ತಾಯಿ – ಅವಳ ಗತಿಯೇನಾಗಬೇಕು.? (ದನಿ ನಡುಗಿಸುತ್ತ) ತಾಯೀ ಭಾರತಾಂಬೇ ಇಷ್ಟಕ್ಕೆಲ್ಲಾ ಕಾರಣನಾದ ಮಗನಿಗೆ ಜನ್ಮ ನೀಡಿದ ಈ ಪಾಪಿಯನ್ನು ಕ್ಷಮಿಸಮ್ಮ ಕ್ಷಮಿಸು."[೫] ಎಂದು ಹೇಳಿ ತನ್ನ ನಾಜೂಕಾದ ನುಡಿಗಳಿಂದ ರಾಮಕ್ಕನನ್ನು ಮರುಳುಗೊಳಿಸಿ ದೂರು ಹಿಂಪಡೆಯುವ ಪತ್ರಕ್ಕೆ ಸಹಿ ಪಡೆದು ಅವಳನ್ನು ನ್ಯಾಯದಿಂದ ವಂಚಿತೆಯನ್ನಾಗಿಸುತ್ತಾನೆ. ಈ ಒಂದು ಘಟನೆಯೇ ಧರ್ಮಾಧಾರಿತ ರಾಜಕೀಯದಲ್ಲಿ ನ್ಯಾಯ ಹೇಗೆ ವಿಡಂಬನೆಗೆ ಒಳಗಾಗುತ್ತದೆ ಎಂಬುದನ್ನು ಕಟ್ಟಿಕೊಡುತ್ತದೆ.

'ಗೋಸುಂಬೆ ನ್ಯಾಯಪೀಠ' ನಾಟಕದಲ್ಲೂ ನಾವು ರಾಜಕಾರಣದಲ್ಲಿ ಧರ್ಮ ಪ್ರವೇಶಿಸುವುದರಿಂದ ನ್ಯಾಯ ವ್ಯವಸ್ಥೆ ಹೇಗೆ ವಿಡಂಬನೆಗೆ ಒಳಗಾಗುತ್ತದೆ ಎಂಬುದನ್ನು ನಾಟಕದ ಉದ್ದಕ್ಕೂ ಗಮನಿಸುತ್ತಾ ಹೋಗಬಹುದು. ಇಲ್ಲಿನ ಫ್ಯಾಸಿಸ್ಟ್ ಸರ್ಕಾರದಲ್ಲಿ ಯಹೂದಿಯೊಬ್ಬ ನ್ಯಾಯ ಪಡೆಯುವುದು ನಿಜಕ್ಕೂ ಮರೀಚಿಕೆಯಾಗಿರುತ್ತದೆ. 'ನ್ಯಾಯಾಲಯದ ಯಾವುದೇ ತೀರ್ಪು ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿರಬೇಕು' ಎಂಬ ಕಾನೂನು ಮಂತ್ರಿಯ ಹೇಳಿಕೆ ಹಾಗೂ 'ವಿಧಿವತ್ತಾಗಿ ತಪ್ಪು ಹೊರಿಸುವುದು ಈ ನಡುವೆ ನಮ್ಮ ಆಡಳಿತದ ಒಂದು ಸಾಂಪ್ರದಾಯಿಕವಾದ ನಡಾವಳಿಯಾಗಿದೆ' ಎಂಬ ಪ್ರಾಸಿಕ್ಯೂಟರ್ ಮಾತು, ಎರಡೂ ಕೂಡ ಮೇಲಿನ ಹೇಳಿಕೆಯನ್ನೇ ಅನುಮೋದಿಸುತ್ತವೆ. ಯಹೂದಿ ಆರ್ನಾಡ್ಟ್ ತಪ್ಪಿತಸ್ಥನಲ್ಲವೆಂದು ಖುಲಾಸೆಗೊಂಡರೆ ಅವನು ತಕ್ಷಣ ಎಸ್.ಎ. ದಳದ ವಿರುದ್ಧ ತನಗಾದ ನಷ್ಟ ಭರಿಸಲು ಕೋರ್ಟಿಗೆ ಹೋಗುತ್ತಾನೆ. ಅದು ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾದ ಅಂಶ ಎಂಬುದು ನ್ಯಾಯಾಧೀಶರ ಭಯ. ಇದಕ್ಕೆ ಪೂರಕವಾಗಿ ಇನ್‌ಸ್ಪೆಕ್ಟರ್ ಕೂಡಾ ಯೋಚಿಸಿ ತೀರ್ಮಾನ ಕೊಡಿ ಇಲ್ಲದಿದ್ದರೆ ನಿಮ್ಮ ತೀರ್ಮಾನದ ಬಗ್ಗೆ ಎಸ್.ಎ. ದಳದವರು ಅನಂತರ ಏನು ತಿಳಿದುಕೊಳ್ಳಬಹುದು ಎಂದು ಹೇಳುತ್ತಾರೆ. ಅಲ್ಲದೆ ಆ ಯಹೂದಿಯೊಬ್ಬ ಎಸ್.ಎ. ದಳದವರನ್ನ ತಪ್ಪಿತಸ್ಥರ ಸ್ಥಾನದಲ್ಲಿ ಹೇಗೆ ನಿಲ್ಲಿಸಬಹುದು? ಎಂದೂ ಎಚ್ಚರಿಸುತ್ತಾರೆ. ಈ ನಡುವೆ ನ್ಯಾಯಾಧೀಶರು ತಮ್ಮ ಸ್ನೇಹಿತರಾದ ಎರಡನೇ ನ್ಯಾಯಾಧೀಶರೊಡನೆ ಮಾತನಾಡುತ್ತಾ 'ನನಗೆ ಮೇಲಿನಿಂದ ಆದೇಶವಾಗಿದೆ. ಹೈಯರ್ ಅಥಾರಿಟಿಗೆ ಮುಜುಗರ ತರುವಂತ ತೀರ್ಪು ಕೊಡದಂತೆ ಸೂಚನೆ ಬಂದಿದೆ' ಎಂದು ಹೇಳುತ್ತಾರೆ. ಹಾಗೆಯೇ "ನನ್ನಿಂದ ಅವರಿಗೆ ಬೇಕಾಗಿರುವುದೇನು? ಎಸ್.ಎ. ದಳಕ್ಕಾಗಾಲಿ ಅಥವಾ ಯೆಹೂದಿಯನ್ನಾಗಲಿ, ಇಲ್ಲಾ ಆ ನಿರುದ್ಯೋಗಿ ವ್ಯಾಗ್ನರ್ ವಿರುದ್ಧ ತೀರ್ಪು ನೀಡಲಿಲ್ಲವೆಂದರೆ ಮತ್ತ್ಯಾವುದಕ್ಕೆ ತೀರ್ಪು ನೀಡುವುದು? ನಿರುದ್ಯೋಗಿ ಮತ್ತು ಯಹೂದಿ ಇಬ್ಬರಲ್ಲಿ ಯಾರನ್ನು ಆಯ್ಕೆ ಮಾಡಿಕೊಳ್ಳುವುದು. ಪಾರ್ಟನರ್–ಮನೆ ಮಾಲೀಕನ ನಡುವೆಯಾ?"[೬] ಎಂದು ತನ್ನ ನ್ಯಾಯ ತೀರ್ಮಾನಕ್ಕಿರುವ ಆತಂಕವನ್ನು ಅಸ್ವಾತಂತ್ರ್ಯವನ್ನು ವ್ಯಕ್ತಪಡಿಸುತ್ತಾರೆ. ಇವನ್ನೆಲ್ಲಾ ಗಮನಿಸಿದಾಗ ಹಿಟ್ಲರನ ಆಡಳಿತದಲ್ಲಿ ಧರ್ಮದ ಪ್ರವೇಶದಿಂದಾಗಿ ನ್ಯಾಯ ವ್ಯವಸ್ಥೆ ಎಂಬುದು ಹೇಗೆ ವಿಡಂಬನೆಗೆ ಒಳಗಾಗಿತ್ತು ಎಂಬುದು ತಿಳಿದು ಬರುತ್ತದೆ.

ಇಂದು ವಿಶ್ವದ ಬಹುತೇಕ ಕಡೆ ರಾಜಕಾರಣ ಕಲುಷಿತಗೊಂಡಿದೆ. ರಾಜಕೀಯ ಪಕ್ಷಗಳು ಜನಪರ ಕಾರ್ಯಕ್ರಮಗಳ ಮೂಲಕ ಜನರ ವಿಶ್ವಾಸ ಗಳಿಸಿ, ತಾತ್ವಿಕ ಮೌಲ್ಯಗಳ ಆಧಾರದ ಮೇಲೆ ಚುನಾವಣೆಯನ್ನು ಎದುರಿಸದೆ, ಜನರ ಭಾವನೆಗಳನ್ನು ಉದ್ರೇಕಿಸುವ ಮೂಲಕ ತಮ್ಮ ರಾಜಕೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿವೆ. ಒಂದೊಂದು ಪಕ್ಷ ಒಂದೊಂದು ಧರ್ಮ ಅಥವಾ ಒಂದೊಂದು ಜಾತಿಯನ್ನು ಓಲೈಸುತ್ತಾ ತಮ್ಮ ಮತ ಬ್ಯಾಂಕನ್ನು ಭದ್ರಪಡಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಹಾಗೂ ಅದು ಯಾವಾಗಲೂ ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳಲು ಈ ಬಗೆಯ ವಿವಾದಗಳನ್ನು ಸದಾ ಜೀವಂತವಾಗಿಡಲು ಯತ್ನಿಸುತ್ತಿವೆ. ಈ ರೀತಿಯ ಅವಕಾಶವಾದಿ ಹಾಗೂ ಧರ್ಮಾಧಾರಿತ ರಾಜಕಾರಣದ ಅಪಾಯಗಳ ಬಗ್ಗೆ ಪ್ರಸ್ತುತ ಲೇಖನವು ಬೆಳಕು ಚೆಲ್ಲುತ್ತದೆ. ಕಂಬಾರರು ಭಾರತದಲ್ಲಿನ ಧರ್ಮಾಧಾರಿತ ರಾಜಕಾರಣವನ್ನಷ್ಟೇ ಅಲ್ಲದೆ, ಜಾತಿಯಾಧಾರಿತ ರಾಜಕಾರಣದ ಕ್ರೌರ್ಯದ ಮೇಲೂ ಬೆಳಕು ಚೆಲ್ಲಿದ್ದಾರೆ. ಹುಸಿ ರಾಷ್ಟ್ರೀಯವಾದ ಮತ್ತು ಜನಾಂಗೀಯವಾದದ ಬೆನ್ನು ಹತ್ತಿ ಧರ್ಮದ ಉನ್ಮಾದದಲ್ಲಿ ಬಹು ಸಂಸ್ಕೃತಿಯ ನೇಯ್ಗೆಯನ್ನು ಹಾಳುಗೆಡವಿ ಏಕಸೂತ್ರದಲ್ಲಿ ಬಂಧಿಸುವ ಪ್ರಯತ್ನ ಭಾರತದ ರಾಜಕಾರಣದಲ್ಲಿ ಇಂದು ಢಾಳಾಗಿ ಕಂಡುಬರುವುದನ್ನು ಪ್ರಸ್ತುತ ನಾಟಕದಲ್ಲಿ ವಿಡಂಬಿಸಿದ್ದಾರೆ. ಬ್ರೆಕ್ಟ್ ಕೂಡಾ ಹಿಟ್ಲರನ ಆಡಳಿತಾವಧಿಯ ಜರ್ಮನಿಯಲ್ಲಿ ಶುದ್ಧ ರಕ್ತ ಹಾಗೂ ಹುಸಿ ರಾಷ್ಟ್ರೀಯತೆಯ ಹೆಸರಿನಲ್ಲಿ ನಡೆಯುತ್ತಿದ್ದ ಜನಾಂಗೀಯ ದ್ವೇಷದ ಮೇಲೆ ಬೆಳಕು ಚೆಲ್ಲಿದ್ದಾರೆ. ಅಲ್ಲದೆ ಅವನ ಆಡಳಿತಾವಧಿಯಲ್ಲಿನ ಸ್ವಜನ ಪಕ್ಷಪಾತ ಹಾಗೂ ನ್ಯಾಯ ವ್ಯವಸ್ಥೆಯಲ್ಲಿನ ಹಸ್ತಕ್ಷೇಪವನ್ನು ತಮ್ಮ ಈ ನಾಟಕದಲ್ಲಿ ಚಿತ್ರಿಸುವ ಮೂಲಕ ಆಳುವವರ ಕುಟಿಲ ನೀತಿಗಳನ್ನು ಜನರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದಾರೆ.

ಒಟ್ಟಿನಲ್ಲಿ ಭಾರತ ಮತ್ತು ಜರ್ಮನಿ ಎರಡೂ ದೇಶಗಳ ಭಾಷೆ ಮತ್ತು ಧರ್ಮಗಳು ಬೇರೆ ಬೇರೆಯಾದರೂ ಅಲ್ಲಿನ ಸಮಸ್ಯೆಗಳು ಒಂದೇ ರೀತಿ ಇರುವಂತೆ ಕಂಡುಬರುತ್ತಿರುವುದು ಧರ್ಮಾಧಾರಿತ ರಾಜಕಾರಣದ ವಿಶ್ವ ವ್ಯಾಪಕತೆಯನ್ನು ಸೂಚಿಸುವಂತಿದೆ. ಪ್ರಚಲಿತ ವಿಶ್ವದ ವಿದ್ಯಾಮಾನವೂ ಹೆಚ್ಚು ಕಡಿಮೆ ಇದೇ ವಾತಾವರಣದಲ್ಲಿದ್ದು, ಈ ಎರಡೂ ನಾಟಕಗಳು ಜಾಗತಿಕ ಎಚ್ಚರವನ್ನು ನೀಡಬಲ್ಲ ಸಮಕಾಲೀನ ಮೌಲ್ಯವುಳ್ಳ ನಾಟಕಗಳಾಗಿವೆ. ಎರಡೂ ನಾಟಕಗಳು ವ್ಯವಸ್ಥೆಯ ಭೀಕರತೆಯನ್ನು ತಣ್ಣಗೆ ಪರಿಚಯಿಸುತ್ತವೆ. ಮನುಷ್ಯ ಮನುಷ್ಯ ಸಂಬಂಧಗಳಿಗೆ ಬೆಂಕಿ ಹಚ್ಚುವ ಅಮಾನವೀಯವಾದ ದಟ್ಟ ಚಿತ್ರಣಗಳು ಎರಡೂ ನಾಟಕಗಳಲ್ಲಿ ಮೂಡಿಬಂದಿವೆ. ಜನಾಂಗೀಯ ಶ್ರೇಷ್ಠತೆ, ಸಂಸ್ಕೃತಿ ರಕ್ಷಣೆ, ರಾಜಕೀಯ ಲಾಭ, ಅಲ್ಪಸಂಖ್ಯಾತರ ತುಳಿತ, ಕೋಮು ಗಲಭೆ, ಮುಂತಾದ ವಿಚಾರಗಳು ಇಬ್ಬರ ನಾಟಕಗಳಲ್ಲೂ ಕಂಡುಬರುತ್ತವೆ. ಭಾರತದಲ್ಲಿ

ಹಿಂದೂ ಧರ್ಮದೊಳಗಿನ ಶ್ರೇಣೀಕೃತ ಜಾತಿ ವ್ಯವಸ್ಥೆ ಈ ಪರಿಕಲ್ಪನೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿರುವುದನ್ನು ಕಂಬಾರರು ವಿಶೇಷವಾಗಿ ಚಿತ್ರಿಸಿದ್ದಾರೆ. ಮತಾಂತರ ಮತ್ತು ಭಯೋತ್ಪಾದನೆ ಎರಡೂ ದೇಶಗಳಲ್ಲಿನ ಚರ್ಚೆಯ ವಿಷಯಗಳಾಗಿದ್ದರೂ ಚರ್ಚಿತ ನಾಟಕಗಳಲ್ಲಿ ಬ್ರೆಕ್ಟ್‌ರಲ್ಲಿ ಮಾತ್ರ ಆ ಬಗೆಯ ವಿಚಾರಗಳಿವೆ. ಒಟ್ಟಾರೆ ರಾಜಕೀಯದಲ್ಲಿ ಧರ್ಮ ಪ್ರವೇಶಿಸುವುದರಿಂದ ನ್ಯಾಯ ವ್ಯವಸ್ಥೆ ಹೇಗೆ ವಿಡಂಬನೆಗೆ ಒಳಗಾಗುತ್ತದೆ ಹಾಗೂ ಜನತೆಯ ಮನಸ್ಸುಗಳು ಹೇಗೆ ವಿಭಜನೆಗೊಳ್ಳುತ್ತವೆ ಎಂಬ ಎಚ್ಚರವನ್ನು ಮೂಡಿಸುವಲ್ಲಿ ಎರಡೂ ನಾಟಕಗಳು ಯಶಸ್ವಿಯಾಗಿವೆ.

**ಕೊನೆ ಟಿಪ್ಪಣಿಗಳು**

೧. ಚಂದ್ರಶೇಖರ ಕಂಬಾರ–ಸಂ: ಡಾ. ಹಾ.ಮಾ.ನಾಯಕ, ಡಾ. ಪ್ರಧಾನ್ ಗುರುದತ್ತ, ಲೇ: ಡಾ.ಬಸವರಾಜ ಮಲಶೆಟ್ಟಿ, ನವಕರ್ನಾಟಕ ಪ್ರಕಾಶನ, ಬೆಂ, ಪ್ರ.ಮು–೨೦೦೧, ಪುಟ–೮೩

೨. ಜಕ್ಕಣ್ಣ ಮತ್ತು ಇತರ ಏಕಾಂಕ ನಾಟಕಗಳು–ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ಬೆಂ, ಪ್ರ.ಮು–೨೦೧೧, ಪುಟ–೫೪

೩. ಬ್ರೆಕ್ಟ್‌ನ ಮೂರು ನಾಟಕಗಳು–ಕನ್ನಡಕ್ಕೆ: ಸಿ.ಬಸವಲಿಂಗಯ್ಯ, ಹೊನ್ನಾರು ಪ್ರಕಾಶನ, ತಿಪಟೂರು, ಪ್ರ.ಮು–೨೦೦೯, ಪುಟ–೫೯

೪. ಅದೇ, ಪುಟ–೭೦

೫. ಜಕ್ಕಣ್ಣ ಮತ್ತು ಇತರ ಏಕಾಂಕ ನಾಟಕಗಳು–ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ಬೆಂ, ಪ್ರ.ಮು–೨೦೧೧, ಪುಟ–೫೯

೬. ಬ್ರೆಕ್ಟ್‌ನ ಮೂರು ನಾಟಕಗಳು–ಕನ್ನಡಕ್ಕೆ: ಸಿ.ಬಸವಲಿಂಗಯ್ಯ, ಹೊನ್ನಾರು ಪ್ರಕಾಶನ, ತಿಪಟೂರು, ಪ್ರ.ಮು–೨೦೦೯, ಪುಟ–೮೫

**ಪರಾಮರ್ಶನ ಗ್ರಂಥಗಳು**

೧. ಚಂದ್ರಶೇಖರ ಕಂಬಾರ–ಸಂ: ಡಾ. ಹಾ.ಮಾ.ನಾಯಕ, ಡಾ. ಪ್ರಧಾನ್ ಗುರುದತ್ತ, ಲೇ: ಡಾ.ಬಸವರಾಜ ಮಲಶೆಟ್ಟಿ, ನವಕರ್ನಾಟಕ ಪ್ರಕಾಶನ, ಬೆಂ, ಪ್ರ.ಮು–೨೦೦೧

೨. ಬ್ರೆಕ್ಟ್–ಎಚ್.ಕೆ.ರಾಮಚಂದ್ರಮೂರ್ತಿ, ವಸಂತ ಪ್ರಕಾಶನ, ಬೆಂ, ಪ್ರ.ಮು–೧೯೭೮